# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 328 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಬಿ.ಎಂ. ಫಾರೂಖ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 15.02.2023 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ವಿವರ |
|---|---|---|
| (ಅ) | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ಉಳ್ಳಾಲದ "ಅಳಿವೆ ಬಾಗಿಲು" ಹೂಳು, ಮರಳಿನಿಂದ ತುಂಬಿ ಅಸಮರ್ಪಕ 'ಡ್ರೆಜ್ಜಿಂಗ್' ಕಾಮಗಾರಿಯಿಂದ ವರ್ಷ ವರ್ಷವೂ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;(ವಿವರ ನೀಡುವುದು) | ಬಂದಿದೆ.<br><br>ಪ್ರತಿ ವರ್ಷ ಗುರುಪುರ ಹಾಗೂ ನೇತ್ರಾವತಿ ನದಿಗಳ ನೀರಿನ ಹರಿವು ಮತ್ತು ಮಳೆಗಾಲದ ಅವಧಿಯಲ್ಲಿ ಅರಬ್ಬೀ ಸಮುದ್ರದ ಉಬ್ಬರ ಇಳಿತದಿಂದಾಗಿ ತಳಭಾಗದ ಮರಳಿನ ಚಲನವಲನದಿಂದಾಗಿ ಹೂಳು ತುಂಬುವುದು ನೈಸರ್ಗಿಕ ಪ್ರಕ್ರಿಯೆಯಾಗಿದೆ. |
| (ಆ) | "ನ್ಯೂ ಮಂಗಳೂರು ಪೋರ್ಟ್ ಬಂದರಿನಲ್ಲಿ ಯಶಸ್ವಿಯಾಗಿ ನಡೆಸಿದ ಮಾದರಿಯಲ್ಲಿ ಸದರಿ ಕಾಮಗಾರಿಯನ್ನು ಅಳಿವೆ ಬಾಗಿಲಿನಲ್ಲಿ ನಡೆಸಿ 5-7 ವರ್ಷಗಳ ದೀರ್ಘಕಾಲಿಕ ಪರಿಹಾರ ನೀಡದಿರಲು ಕಾರಣಗಳೇನು; | ಈವರೆಗೆ ಮೀನುಗಾರಿಕಾ ದೋಣಿಗಳು ಮತ್ತು ವಾಣಿಜ್ಯ ನೌಕೆಗಳಿಗೆ ಅಗತ್ಯವಿರುವ (-)4.00 ಮೀ. ಆಳವನ್ನು ಅಳಿವೆಬಾಗಿಲಿನಲ್ಲಿ ಕಾಯ್ದುಕೊಳ್ಳಲು ಬಳಕೆದಾರರ ಅಗತ್ಯಗಳಿಗನುಗುಣವಾಗಿ ಹಾಗೂ ಅನುದಾನದ ಲಭ್ಯತೆಯಂತೆ ನಿರ್ವಹಣಾ ಕಾಮಗಾರಿಗಳನ್ನು ಮಂಜೂರಾತಿ ಪಡೆದು ನಿರ್ವಹಿಸಲಾಗಿರುತ್ತದೆ. ಕಳೆದ 07 ವರ್ಷಗಳಲ್ಲಿ 03 ಬಾರಿ ಒಟ್ಟು ₹.247.00 ಲಕ್ಷಗಳ ಮೊತ್ತದಲ್ಲಿ ಹೂಳೆತ್ತಲಾಗಿರುತ್ತದೆ.<br><br>ಮುಂದುವರೆದು, ಅಳಿವೆ ಬಾಗಿಲು ಹಾಗೂ ನೆವಿಗೇಷನ್ ಚಾನಲ್‌ಗಳನ್ನು (-)7.00 ಮೀ. ಆಳಕ್ಕೆ ಸಮಗ್ರವಾಗಿ ಹೂಳೆತ್ತಿ ಅಳಿವೆ ಬಾಗಿಲಿನ ಮೂಲಕ ವಾಣಿಜ್ಯ ನೌಕೆಗಳು ಸುಗಮವಾಗಿ ಸಂಚರಿಸಲು ಈಗಾಗಲೇ ಸಾಗರಮಾಲ ಯೋಜನೆಯಡಿ ₹.29.00 ಕೋಟಿಗಳ ಕ್ಯಾಪಿಟಲ್ ಡ್ರೆಜ್ಜಿಂಗ್ ಕಾಮಗಾರಿ ಮಂಜೂರಾಗಿದೆ. |
| (ಇ) | ವರ್ಷ ವರ್ಷ ತೋರಿಕೆಯ ಡ್ರೆಜ್ಜಿಂಗ್ ನಡೆಸಿ ಸಮಸ್ಯೆ ಸದಾ ಜೀವಂತವಾಗಿರಿಸಲು ಕಾರಣಗಳೇನು ಹಾಗೂ ದೀರ್ಘಕಾಲಿಕ ಪರಿಹಾರ ಸರ್ಕಾರ ಕೈಗೊಂಡ ಕ್ರಮಗಳೇನು; | ಪ್ರತಿ ವರ್ಷ ಮಳೆಗಾಲದಲ್ಲಿ ನದಿಗಳ ನೀರಿನ ಹರಿವು ಮತ್ತು ಅರಬ್ಬೀ ಸಮುದ್ರದ ಉಬ್ಬರ ಇಳಿತದಿಂದಾಗಿ ತಳಭಾಗದಲ್ಲಿ ಮರಳಿನ ಚಲನವಲನದಿಂದಾಗಿ ಹೂಳು ತುಂಬುವುದು ನೈಸರ್ಗಿಕ ಪ್ರಕ್ರಿಯೆಯಾಗಿದ್ದು, ಈ ಹಿನ್ನೆಲೆಯಲ್ಲಿ ಮಂಗಳೂರು ಹಳೇ ಬಂದರಿನ ವಾಣಿಜ್ಯ ಚ್ಯಾನೆಲ್ ನಲ್ಲಿ ನಾವೆಗಳ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ನಿರ್ವಹಣಾ ಡ್ರೆಜ್ಜಿಂಗ್ ಕೆಲಸಗಳ ಮೂಲಕ ಹೂಳನ್ನು ತೆಗೆಯುವುದು ಅನಿವಾರ್ಯವಾಗಿರುತ್ತದೆ. ಕಳೆದ 07 ವರ್ಷಗಳಲ್ಲಿ ಅವಶ್ಯಕತೆಗೆ ತಕ್ಕಂತೆ 03 ಬಾರಿ ನಿರ್ವಹಣಾ ಡ್ರೆಜ್ಜಿಂಗನ್ನು ಈ ಕೆಳಗಿನಂತೆ ಕೈಗೊಳ್ಳಲಾಗಿರುತ್ತದೆ.<br><br>1. 2016-17ನೇ ಸಾಲಿನಲ್ಲಿ ಅಳಿವೆ ಬಾಗಿಲಿನಲ್ಲಿ ಶೇಖರಣೆಯಾದ ಹೂಳನ್ನು ತೆಗೆಯಲು Dredging at Bar-mouth Channel of Old Mangalore Port, Mangalore ಕಾಮಗಾರಿಯನ್ನು ₹99.50 ಲಕ್ಷಗಳಲ್ಲಿ ಕೈಗೊಳ್ಳಲಾಗಿದೆ. |

..2..

| ಕ್ರ. ಸಂ. | ಪ್ರಶ್ನೆ | ವಿವರ |
|---|---|---|
| | | 2. 2019-20ನೇ ಸಾಲಿನಲ್ಲಿ ಮಂಗಳೂರು ಬಂದರು ಧಕ್ಕೆ ಮುಂಭಾಗದಲ್ಲಿ ಹೂಳೆತ್ತುವ ಕಾಮಗಾರಿಗೆ ಮಂಜೂರಾಗಿರುವ ₹100.00 ಲಕ್ಷಗಳ ಕಾಮಗಾರಿಯಲ್ಲಿ ಭಾಗಶ: ಪರಿಮಾಣವನ್ನು ಅಳಿವೆ ಬಾಗಿಲಿನಲ್ಲಿ ಶೇಖರಣೆಯಾದ ಹೂಳನ್ನು ತೆಗೆಯಲು ನಿರ್ವಹಣಾ ಡ್ರೆಜ್ಜಿಂಗ್‌ಗೆ ಉಪಯೋಗಿಸಲಾಗಿರುತ್ತದೆ.<br>3. 2022-23 ನೇ ಸಾಲಿನಲ್ಲಿ Dredging in barmouth for the movement of vessels at Old Port Mangalore ಕಾಮಗಾರಿಗೆ ₹100.00 ಲಕ್ಷಗಳು ಮಂಜೂರಾಗಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>ಅಲ್ಲದೇ, ಸಾಗರಮಾಲ ಯೋಜನೆಯಡಿ ಮಂಗಳೂರು ಹಳೇ ಬಂದರಿನ Navigation Channel ನ ಸಂಪೂರ್ಣ 4.00 ಮೀ. ಉದ್ದವನ್ನು -7.00 ಮೀ. ಆಳಕ್ಕೆ ಸಮಗ್ರವಾಗಿ ಹೂಳೆತ್ತುವ ಸಲುವಾಗಿ Capital Dredging at Old Port Mangalore ಕಾಮಗಾರಿಗೆ ₹.29.00 ಕೋಟಿ ಮಂಜೂರಾಗಿದೆ. |
| (ಈ) | ಹೊರ ಪ್ರದೇಶಗಳಿಗೆ ರಫ್ತಾಗುವ ಹಡಗುಗಳು ಸಂಚರಿಸದೆ ಆದಾಯ ನಷ್ಟ ಆಗುತ್ತಿದ್ದು, ಇದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಮಂಗಳೂರು, ಹಳೇ ಬಂದರಿನ ಆಮದು-ರಫ್ತು ಪ್ರಕ್ರಿಯೆ ಮತ್ತು ಆದಾಯವನ್ನು ಹೆಚ್ಚಿಸುವ ಸಲುವಾಗಿ ಹಲವು ಯೋಜನೆಗಳನ್ನು ಕೈಗೊಳ್ಳಲಾಗುತ್ತಿದ್ದು, ಪ್ರಮುಖ ಕಾಮಗಾರಿಗಳ ವಿವರಗಳು ಈ ಕೆಳಗಿನಂತಿವೆ.<br>1. ಮಂಗಳೂರು, ಹಳೇ ಬಂದರಿನ ಸಾಮರ್ಥ್ಯವನ್ನು ಹೆಚ್ಚಿಸಲು ಸಾಗರಮಾಲ ಯೋಜನೆಯಡಿ ಕೋಸ್ಟಲ್ ಬರ್ತ್ ನಿರ್ಮಾಣ ಕಾಮಗಾರಿಗೆ ₹65.00 ಕೋಟಿ ಮಂಜೂರಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>2. ಮಂಗಳೂರು ಹಳೇ ಬಂದರಿನಿಂದ ಅಳಿವೆ ಬಾಗಿಲಿನವರೆಗಿನ 4.00 ಮೀ. ಉದ್ದದ ವಾಣಿಜ್ಯ Navigation Channel ನ್ನು -7.00 ಮೀ. ಆಳಕ್ಕೆ ಹೂಳೆತ್ತುವ ಸಲುವಾಗಿ ಸಾಗರಮಾಲ ಯೋಜನೆಯಡಿ Capital Dredging at Old Port Mangalore ಕಾಮಗಾರಿಗೆ ₹.29.00 ಕೋಟಿ ಮಂಜೂರಾಗಿದೆ.<br>3. ಮಂಗಳೂರು ಹಳೇ ಬಂದರಿನಲ್ಲಿ ಅಂದಾಜು ₹65.00 ಕೋಟಿ ವೆಚ್ಚದಲ್ಲಿ ಲಕ್ಷದ್ವೀಪದೊಂದಿಗೆ ಐತಿಹಾಸಿಕ ವ್ಯಾಪಾರ ಒಪ್ಪಂದಗಳನ್ನು ಪುನರುಜ್ಜೀವನಗೊಳಿಸಲು ಪೂರಕ ಮೂಲಭೂತ ಸೌಕರ್ಯಗಳು ಹಾಗೂ ಹಡಗು ಟರ್ಮಿನಲ್ ಸಹಿತ ಸಮರ್ಪಿತ ಜೆಟ್ಟಿ (Dedicated Jetty) ಅಭಿವೃದ್ಧಿ ಕಾಮಗಾರಿ ಮಂಜೂರಾಗಿದೆ. |

ಸಂಖ್ಯೆ: ಐಡಿಡಿ 16 ಪಿಎಸ್‌ಪಿ 2023

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.